**ರಾಜ್ಯದ ಅಕ್ಷರಶಃ ಕೇಂದ್ರ ಭಾಗದಲ್ಲಿರುವ ಚಿತ್ರದುರ್ಗ ಜಿಲ್ಲೆಗೆ ದೇಶದ ಹೆಮ್ಮೆಯ ಸಂಶೋಧನಾ ಕೇಂದ್ರಗಳು ಬರಲಿವೆ. ಬೆಂಗಳೂರನ್ನೂ ಸೆಡ್ಡು ಹೊಡೆಯುವಷ್ಟು ಅಭಿವೃದ್ಧಿ ಚಿತ್ರದುರ್ಗದಂಥ ಸ್ಥಳಗಳಲ್ಲಿ ಆದಾಗ ಮಾತ್ರ ರಾಜ್ಯದಲ್ಲಿನ ಪ್ರಾದೇಶಿಕ ಅಸಮತೋಲ ನಿರ್ಮೂಲವಾಗಬಹುದು.**

# ಭವಿಷ್ಯತ್ತಿನ ವಿಜ್ಞಾನ-ತಂತ್ರಜ್ಞಾನ ರಾಜಧಾನಿ-ಚಿತ್ರದುರ್ಗ


ಸುಧೀಂದ್ರ ಹಾಲ್ದೊಡ್ಡೇರಿ



**ನೆಟ್ ನೋಟ**

haldodderi@vijaykarnataka.com


ರೆಸಾರ್ಟ್‌ಗಳಲ್ಲಿ ಕುಟಿಲ ರಣತಂತ್ರಗಳನ್ನು ರೂಪಿಸುತ್ತ, ಲೂಟಿ ಹೊಡೆದ ಕೋಟಿಗಟ್ಟಲೆ ರೂಪಾಯಿ ಹಣವನ್ನು ಬೆಂಬಲ ಕೊಡುವವರಿಗೆ ಕಡ್ಲೆಪುರಿಯಂತೆ ಹಂಚುತ್ತ, ಸಂವಿಧಾನ-ಪ್ರಜಾಪ್ರಭುತ್ವಗಳ ಸಂರಕ್ಷಕರೆಂದು ಪೋಸು ಕೊಡುವುದೇ ರಾಜಕಾರಣ ಎಂಬ ಹೊಸ ಅರ್ಥವನ್ನು ನಿಘಂಟಿನಲ್ಲಿ ಬರೆಯಬಹುದಾದ ಕಾಲವಿದು. ಕನ್ನಡಿಗರೆಲ್ಲರ ಮಾನವನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಹರಾಜು ಹಾಕುತ್ತಿರುವ ಈ ಲಜ್ಜೆಗೆಟ್ಟ ರಾಜಕಾರಣಿಗಳ ಬಗ್ಗೆ ಓದುವುದಿರಲಿ, ನೆನಪಿಸಿಕೊಳ್ಳುವುದೂ ಅಸಹ್ಯ. ಇಂಥ ಸಂದರ್ಭದಲ್ಲಿ ಅಚಾನಕ್ಕಾಗಿ ಭೆಟ್ಟಿಯಾದವರು ರಾಜಕಾರಣಕ್ಕೇ ಒಂದು ಅಪವಾದವೆಂಬಂತಿರುವ ನಮ್ಮ ಚಿತ್ರದುರ್ಗದ ಯುವ ಸಂಸದ ಜನಾರ್ದನಸ್ವಾಮಿ. ವಿಜ್ಞಾನ- ತಂತ್ರಜ್ಞಾನವನ್ನು ಹೆಚ್ಚು ನಿಷ್ಠೆಯಿಂದ ಕಲಿತು, ಅಮೆರಿಕದಲ್ಲಿರುವ ಜಗನ್ಮಾನ್ಯ ಕಂಪನಿಗಳಲ್ಲಿ ಜವಾಬ್ದಾರಿಯ ಕಾರ್ಯಗಳನ್ನು ನಿರ್ವಹಿಸಿರುವವರು. ಪೇಟೆಂಟುಗಳ ನಂಟಿನಲ್ಲಿ, ಕೈತುಂಬಿ ಸುರಿಯುವ ಡಾಲರ್ ವರಮಾನದಲ್ಲಿ ತಾಯ್ನೆಲವನ್ನು ಸುಲಭವಾಗಿ ಮರೆಯಬಹುದಾಗಿದ್ದವರು. ಭಾರತಕ್ಕೆ ಹಿಂದಿರುಗಿದರು. ಕೆಲ ಕಾಲ ಇಲ್ಲಿಯ ಬಹುರಾಷ್ಟ್ರೀಯ ಕಂಪನಿಗಳಲ್ಲಿ ಕೆಲಸ ಮಾಡಿದರು. ಕಳೆದ ಲೋಕಸಭೆ ಚುನಾವಣೆಯಲ್ಲಿ ಬಿ.ಜೆ.ಪಿ. ಅಭ್ಯರ್ಥಿಯಾಗಿ ಸ್ಪರ್ಧಿಸಿ ಗೆದ್ದರು. ಸುಮ್ಮನೆ ನಮ್ಮ ವ್ಯವಸ್ಥೆಯನ್ನು ದೂಷಿಸುವ ಬದಲು, ವ್ಯವಸ್ಥೆಯ ಭಾಗವಾಗಿ ಒಂದಷ್ಟು ಬದಲಾವಣೆಗಳನ್ನು ತರಬೇಕೆಂದು ಕನಸು ಹೊತ್ತವರು. ಇಂಥವರು ತಮ್ಮ ಕ್ಷೇತ್ರದಲ್ಲೇನು ಕೆಲಸ ಹಚ್ಚಿಕೊಂಡಿದ್ದಾರೆ? ಲೋಕಸಭೆಯಲ್ಲಿ ಏನು ಮಾಡುತ್ತಿದ್ದಾರೆ? ಎಂಬ ಸಹಜ ಕುತೂಹಲ ನನ್ನಲ್ಲಿತ್ತು.

ಕಳೆದ ಭಾನುವಾರ 'ಕನ್ನಡ ವಿಜ್ಞಾನ ಪರಿಷತ್ತು' ಬೆಂಗಳೂರಿನಲ್ಲಿ ಹಮ್ಮಿಕೊಂಡಿದ್ದ ತನ್ನ ರಜತೋತ್ಸವ ಪ್ರಶಸ್ತಿ ಪುರಸ್ಕಾರ ಸಮಾರಂಭದ ಅಧ್ಯಕ್ಷತೆಯನ್ನು ಅವರು ವಹಿಸುವವರಿದ್ದರು. ಸಮಾರಂಭಕ್ಕೆ ಪೂರ್ವಭಾವಿಯಾಗಿ ಮಾತಿಗೆ ಸಿಕ್ಕ ಜನಾರ್ದನ ಸ್ವಾಮಿ ಕೇವಲ ಒಂದು ಗಂಟೆಯ ಕಾಲಾವಧಿಯಲ್ಲಿ ಚಿತ್ರದುರ್ಗದ ಭವಿಷ್ಯದ ಚಿತ್ರಣವನ್ನು ನನ್ನ ಮುಂದೆ ತೆರೆದಿಟ್ಟರು. ಮನಸ್ಸು ಮಾಡಿದರೆ ಲೋಕಸಭೆ ಸದಸ್ಯರು ತಮ್ಮ ಕ್ಷೇತ್ರವನ್ನು ದೇಶಕ್ಕೇ ಮಾದರಿಯಾಗಿ ಪರಿವರ್ತಿಸಬಹುದೆಂಬುದರ ಬಗ್ಗೆ ಪ್ರಾತ್ಯಕ್ಷಿಕೆ ನೀಡಿದರು. ಕೇವಲ ಹೊಗಳಿಕೆಯ ಮಾತಲ್ಲ, ಬೆಂಗಳೂರಿನ ಜಗತ್ಪ್ರಸಿದ್ಧ ವಿಜ್ಞಾನ ಸಂಸ್ಥೆ 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್'ನ ಮತ್ತೊಂದು ಕ್ಯಾಂಪಸ್ ಚಿತ್ರದುರ್ಗದಲ್ಲೇ ಆರಂಭವಾಗಲಿದೆ. ಮೂಲ ವಿಜ್ಞಾನ ವಿಷಯಗಳಲ್ಲಿ ಉನ್ನತ ಸಂಶೋಧನೆಗಳನ್ನು ಕೈಗೊಳ್ಳಲು ಅಂತಾರಾಷ್ಟ್ರೀಯ ಮಟ್ಟದ ಸೌಕರ್ಯಗಳನ್ನು ಈ ಕ್ಯಾಂಪಸ್ ಒದಗಿಸಲಿದೆ. ಇದು ಕೇವಲ ಚಿತ್ರದುರ್ಗದ ಜನರಷ್ಟೇ ಹೆಮ್ಮೆ ಪಡಬೇಕಾದ ವಿಷಯವಲ್ಲ, ಇಡೀ ಕರ್ನಾಟಕದ ವಿಜ್ಞಾನಾಸಕ್ತರು ಸಂಭ್ರಮಿಸುವಂಥದ್ದು. ದೇಶದ ಹೆಮ್ಮೆಯ 'ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ' - ಡಿಆರ್‌ಡಿಒ ನಿಮಗೆ ಗೊತ್ತು. ಇದು ಬೆಂಗಳೂರಿನ ಪ್ರಯೋಗಶಾಲೆ 'ವೈಮಾನಿಕ ಅಭಿವೃದ್ಧಿ ಸಂಸ್ಥೆ' -ಎ.ಡಿ.ಇ. ಮೂಲಕ 'ನಿಶಾಂತ್' ಎಂಬ 'ಮಾನವ-ರಹಿತ ವಿಮಾನ'ಗಳನ್ನು ರೂಪಿಸಿ, ನಿರ್ಮಿಸಿ, ಯಶಸ್ವಿ ಹಾರಾಟಗಳನ್ನು ನಡೆಸಿದೆ. 'ರುಸ್ತುಂ' ಸರಣಿಯ ದೊಡ್ಡ ಗಾತ್ರದ ಮಾನವ ರಹಿತ ವಿಮಾನಗಳನ್ನು ಅಭಿವೃದ್ಧಿಪಡಿಸುತ್ತಿದೆ. ಇಂಥ ಮಾನವ ರಹಿತ ವಿಮಾನಗಳ ಹಾರಾಟ ಪರೀಕ್ಷಾ ಕೇಂದ್ರವೊಂದು ಚಿತ್ರದುರ್ಗದಲ್ಲಿ ಸದ್ಯದಲ್ಲೇ ಆರಂಭವಾಗಲಿದೆ. ಇವೆರಡಕ್ಕೂ ಕಿರೀಟಪ್ರಾಯವೆಂಬಂತೆ ನಮ್ಮೆಲ್ಲರ ಹೆಮ್ಮೆಯ 'ಭಾರತೀಯ ಬಾಹ್ಯಾಕಾಶ ಸಂಸ್ಥೆ'- ಇಸ್ರೋದ ಸಂಶೋಧನಾ ಕೇಂದ್ರವೊಂದು ಚಿತ್ರದುರ್ಗದಲ್ಲಿ ಆರಂಭವಾಗುವ ನಿರೀಕ್ಷೆಯಿದೆ.

ಇವೆಲ್ಲವೂ ಉನ್ನತ ಶಿಕ್ಷಣದ, ಅತ್ಯುನ್ನತ ಸಂಶೋಧನೆಯ ಕೇಂದ್ರಗಳು. ಸಾಮಾನ್ಯ ಜನರಿಗೆ ಏನು ಉಪಯೋಗ? ಎಂಬ ಪ್ರಶ್ನೆ ನಿಮ್ಮಲ್ಲೀಗ ಮೂಡಿರಬಹುದು. ಬೆಂಗಳೂರನ್ನು ಧುತ್ತೆಂದು ಎಪ್ಪತ್ತು ವರ್ಷಗಳ ಹಿಂದೆ ದೂಡಿದರೆ ನಿಮಗೆ ಇಂದಿನ ಚಿತ್ರದುರ್ಗ ಸಿಕ್ಕೀತು. ಅಂದು ಮೈಸೂರು ರಾಜ್ಯದ ದಿವಾನರಾಗಿದ್ದ ಸರ್ ಎಂ. ವಿಶ್ವೇಶ್ವರಯ್ಯನವರು ಬೆಂಗಳೂರಿನಲ್ಲಿ ಕಾರು ಕಾರ್ಖಾನೆಯೊಂದನ್ನು ಸ್ಥಾಪಿಸುವ ಕನಸು ಹೊತ್ತಿದ್ದರು. ಇದಕ್ಕೆಂದೇ ಅಮೆರಿಕ, ಜರ್ಮನಿ ದೇಶಗಳ ಕಾರು ತಯಾರಿಕಾ ಕಂಪನಿಗಳಿಗೆ ಭೇಟಿಯಿತ್ತು, ಅಲ್ಲಿನ ಉದ್ದಿಮೆದಾರರನ್ನು ಬೆಂಗಳೂರಿನಲ್ಲಿ ಕಾರ್ಖಾನೆ ಸ್ಥಾಪಿಸಲು ಒಲ್ಲೈಸಿದ್ದರು. ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಂದ ಕಾರ್ಖಾನೆಗೆ ಬೇಕಾದ ಜಮೀನು ಹಾಗೂ ಉಳಿದ ಸಂಪನ್ಮೂಲಗಳ ಕ್ರೋಡೀಕರಣದ ಭರವಸೆ ಪಡೆದಿದ್ದರು. ತಮ್ಮ ದೇಶದ ಕಾರುಗಳಿಗೆ ಭಾರತದಿಂದ ಪ್ರತಿಸ್ಪರ್ಧೆ ಬರುವುದನ್ನು ತಪ್ಪಿಸಲು ಅಂದಿನ ಬ್ರಿಟನ್ ಸರಕಾರ ಬೆಂಗಳೂರಿನ ಕಾರು ಕಾರ್ಖಾನೆಗೆ ತಡೆಯೊಡ್ಡಿತು. ಜಾಗತಿಕ ಮಹಾಯುದ್ಧದ ಸಂದರ್ಭದಲ್ಲಿ ಕಾರು ಕಾರ್ಖಾನೆಗೆ ಮೀಸಲಿದ್ದ ಜಾಗದಲ್ಲಿ ವಿಮಾನ ರಿಪೇರಿ ಕಾರ್ಖಾನೆ ಆರಂಭಿಸಲು ಬ್ರಿಟನ್ ಸರಕಾರ ನಿರ್ಧರಿಸಿತು. ಇದನ್ನೇ ಒಂದು ಅವಕಾಶವೆಂದು ಭಾವಿಸಿದ ವಿಶ್ವೇಶ್ವರಯ್ಯನವರು ತಾವು ಸಲಹೆಗಾರರಾಗಿದ್ದ ವಿಶಾಖ ಪಟ್ಟಣದಲ್ಲಿ ಹಡಗು ನಿರ್ಮಾಣ ಕಂಪನಿಯ ಮಾಲೀಕ ಸೇಠ್ ವಾಲ್‌ಚಂದ್ ಹೀರಾಚಂದ್ ಅವರನ್ನು ಬೆಂಗಳೂರಿಗೆ ಬರಲು ಪ್ರೇರೇಪಿಸಿದರು. ಬ್ರಿಟನ್ ಸರಕಾರ, ಮೈಸೂರು ಸರಕಾರದ ಸಹಭಾಗಿತ್ವದಲ್ಲಿ 'ಹಿಂದೂಸ್ತಾನ್ ಏರ್ ಕ್ರಾಫ್ಟ್ ಲಿಮಿಟೆಡ್' ಸಂಸ್ಥೆಯನ್ನು ವಾಲ್‌ಚಂದ್ ಹೀರಾಚಂದ್ ಸ್ಥಾಪಿಸಿದರು. ಮುಂದಿನದು ಇತಿಹಾಸ. 'ಉದ್ಯಾನ ನಗರಿ'ಯಾಗಿ 'ಪಿಂಚಣಿಗರ ಸ್ವರ್ಗ'ವಾಗಿದ್ದ ಬೆಂಗಳೂರು 'ವಿಜ್ಞಾನ ನಗರಿ'ಯಾಗಿ, 'ವಿಮಾನ ನಗರ'ವಾಗಿ, ಸಾರ್ವಜನಿಕ ವಲಯದ ಕಾರ್ಖಾನೆಗಳ ಕೇಂದ್ರವಾಯಿತು. ದೇಶದ 'ವೈಮಾಂತರಿಕ್ಷ ರಾಜಧಾನಿ'ಯಾಗಿ ಬದಲಾಯಿತು. ಈ ಸುಭದ್ರ ಬುನಾದಿಯಿಂದ ಬೆಂಗಳೂರು ದೇಶದ ಹೆಮ್ಮೆಯ 'ಮಾಹಿತಿ ತಂತ್ರಜ್ಞಾನ ರಾಜಧಾನಿ'ಯೆಂಬ ಕೀರ್ತಿ ಪಡೆಯಿತು. ಸಾವಿರಗಟ್ಟಲೆಯಲ್ಲಿ ಕಂಪನಿಗಳು ಬೆಂಗಳೂರು ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಸ್ಥಾಪನೆಯಾದವು. ಲಕ್ಷಗಟ್ಟಲೆ ವಿದ್ಯಾವಂತರಿಗೆ ಉದ್ಯೋಗ ನೀಡುವ ನಗರವಾಯಿತು. ಇದೇ ಸೆಪ್ಟೆಂಬರ್ 15, ವಿಶ್ವೇಶ್ವರಯ್ಯನವರ ನೂರೈವತ್ತನೆಯ ಹುಟ್ಟುಹಬ್ಬ ಸಂದರ್ಭಕ್ಕೆ ಪತ್ರಕರ್ತ ಪ್ರತಾಪ್‌ಸಿಂಹ 'ವಿಜಯ ಕರ್ನಾಟಕ'ಕ್ಕೆ ಬರೆದಿದ್ದ ಲೇಖನದಲ್ಲಿ ಈ ವಿಷಯಗಳು ವಿವರವಾಗಿ ಪ್ರಸ್ತಾಪವಾಗಿವೆ.

ಹೆಚ್ಚೂ ಕಡಿಮೆ ಕರ್ನಾಟಕ ರಾಜ್ಯದ ಜ್ಯಾಮಿತಿ ಕೇಂದ್ರದ



ಸಮೀಪವಿರುವ ಚಿತ್ರದುರ್ಗ ಜಿಲ್ಲೆ ಐತಿಹಾಸಿಕವಾಗಿ ಪ್ರಸಿದ್ಧ ಸ್ಥಳ. ಚಿತ್ರದುರ್ಗವನ್ನು ಕೇಂದ್ರವಾಗಿಸಿಕೊಂಡು ಅಭಿವೃದ್ಧಿಯ ವ್ಯಾಪ್ತಿಯನ್ನು ವಿಸ್ತರಿಸುತ್ತಾ ಹೋದಂತೆ ಇಡೀ ರಾಜ್ಯ ಪ್ರಗತಿ ಹೊಂದಬಹುದು. ಸುತ್ತಲಿನ ಎಲ್ಲ ಜಿಲ್ಲೆಗಳೂ ಒಂದೊಂದಾಗಿ ಅಭಿವೃದ್ಧಿ ಪಥದಲ್ಲಿ ಮುನ್ನಡೆ ಸಾಧಿಸಬಹುದು. ಪ್ರಾದೇಶಿಕ ಅಸಮತೋಲವನ್ನು ಹೋಗಲಾಡಿಸಬಹುದು. ಯಾವುದೇ ನಗರದಲ್ಲಿ ಸರಕಾರಿ ಸಂಸ್ಥೆಗಳು ಭಾರಿ ಮಟ್ಟದಲ್ಲಿ ಹಣ ಹೂಡಿ, ಮೂಲಸೌಕರ್ಯಗಳು ಸ್ಥಾಪನೆಯಾದ ನಂತರವಷ್ಟೇ ಖಾಸಗಿ ಸಂಸ್ಥೆಗಳು ಅಲ್ಲಿ ಬಿಡದಿ ಹೂಡಲು ಸಾಧ್ಯ. ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಪಕ್ಷಕ್ಕೆ ವಿರೋಧವಾಗಿರುವ ಪಕ್ಷಗಳು ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ಸಂದರ್ಭದಲ್ಲೂ ಕರ್ನಾಟಕಕ್ಕೆ, ವಿಶೇಷವಾಗಿ ಚಿತ್ರದುರ್ಗದಂಥ ಜಿಲ್ಲೆಗೆ ಇಷ್ಟೆಲ್ಲಾ ವಿಜ್ಞಾನ-ತಂತ್ರಜ್ಞಾನ ಕೇಂದ್ರಗಳು ಬರುತ್ತಿರುವ ಸಂಗತಿ ನಿಜಕ್ಕೂ ಹೆಮ್ಮೆಯದು. ಇದರ ಹಿಂದೆ ಸಂಸದ ಜನಾರ್ದನ ಸ್ವಾಮಿಯವರ ಅಪಾರ ಪರಿಶ್ರಮವಿದೆ.

ತಿಂಗಳೊಂದರ ಹಿಂದೆ ಚಿತ್ರದುರ್ಗ ಜಿಲ್ಲೆಯಲ್ಲಿ ಅತ್ಯಾಧುನಿಕ ಸಂಪರ್ಕಜಾಲವಿರುವ ಮಾಹಿತಿ ಕೇಂದ್ರವನ್ನು ಜನಾರ್ದನ ಸ್ವಾಮಿ ಆರಂಭಿಸಿರುವ ಬಗ್ಗೆ ಪತ್ರಿಕೆಗಳಲ್ಲಿ ನೀವೀಗಾಗಲೇ ಓದಿರುತ್ತೀರಿ. ಜನಸಾಮಾನ್ಯರಿಗೆಂದು ಕೇಂದ್ರ ಹಾಗೂ ರಾಜ್ಯ ಸರಕಾರಗಳು ಆರಂಭಿಸಿರುವ ಯೋಜನೆಗಳ ಬಗ್ಗೆ ಈ ಕೇಂದ್ರದಲ್ಲಿ ಮಾಹಿತಿ ಪಡೆಯಬಹುದು. ಅರ್ಜಿಗಳನ್ನು ಕಳುಹಿಸಬಹುದು, ಮಾಹಿತಿ ಪತ್ರಗಳನ್ನು ಮುದ್ರಿಸಿಕೊಳ್ಳಬಹುದು, ದೂರುಗಳನ್ನು ದಾಖಲಿಸಬಹುದು. ಹೀಗೆ ಸಾರ್ವಜನಿಕರು ತಾವು ಆಯ್ಕೆ ಮಾಡಿ ಸಂಸತ್ತಿಗೆ ಕಳುಹಿಸಿದ ಸದಸ್ಯರೊಂದಿಗೆ ಸಂಪರ್ಕ ಸಾಧಿಸಬಹುದು. ಅವರು ಲೋಕಸಭೆ ಸೇರಿದಂತೆ ಉಳಿದ ಯಾವುದೇ ಸ್ಥಳದಲ್ಲಿ ಏನೆಲ್ಲಾ ಕಾರ್ಯಗಳನ್ನು ನಡೆಸುತ್ತಿದ್ದಾರೆಂಬುದರ ಬಗ್ಗೆ ಕ್ಷಣಾರ್ಧದಲ್ಲಿ ಮಾಹಿತಿ ಪಡೆಯಬಹುದು. ಸ್ವತಃ ಮಾಹಿತಿ ತಂತ್ರ ಜ್ಞಾನ ಪರಿಣತರಾದ ಜನಾರ್ದನ ಸ್ವಾಮಿ ತಮ್ಮ ಕ್ಷೇತ್ರದಲ್ಲಿ ಕಲ್ಪಿಸಿ ರುವ ಸೌಕರ್ಯವಿದು. ಇಲ್ಲಿ ಉಲ್ಲೇಖಿಸಲೇಬೇಕಾದ ಸಂಗತಿ ಯೊಂದಿದೆ. ಈ ಬಾರಿ ಸಂಸತ್ತಿನಲ್ಲಿ ಸಾಕಷ್ಟು ಯುವಜನರು ಆಯ್ಕೆ ಯಾಗಿದ್ದಾರೆ. ಅವರಲ್ಲಿ ಎಷ್ಟೋ ಮಂದಿ ತಂತ್ರಜ್ಞಾನ ಪದವಿಗಳನ್ನೂ ಪಡೆದಿದ್ದಾರೆ. ದೇಶದ ಭವಿಷ್ಯತ್ತನ್ನು ನಿರ್ಧರಿಸುವವರು ಎಂದು ಬಿಂಬಿತರಾದವರೂ ಇದ್ದಾರೆ. ಅವರು ಯಾರೂ ಮಾಡದ ಕೆಲಸ ವನ್ನು ನಮ್ಮ ಜನಾರ್ದನ ಸ್ವಾಮಿ ಚಿತ್ರದುರ್ಗದಲ್ಲಿ ಮಾಡಿದ್ದಾರೆ.

ಚಿತ್ರದುರ್ಗದಲ್ಲಿ ಗಾಳಿಯಂತ್ರಗಳು ಸ್ಥಾಪನೆಯಾಗಿವೆ. ನೆದರ್‌ಲೆಂಡ್ಸ್‌ನಂಥ ದೇಶದಲ್ಲಿ ಗಾಳಿಚಕ್ರಗಳು ರಾಷ್ಟ್ರೀಯ ಸಂಕೇತಗಳಾಗಿ ವಿಜೃಂಭಿಸುತ್ತಿವೆ. ಈ ನಿಟ್ಟಿನಲ್ಲಿ ಮತ್ತೇನಾದರೂ ಪ್ರಗತಿಯಾಗಿದೆಯೆ? ಎಂಬ ಕುತೂಹಲದ ಪ್ರಶ್ನೆ ನನ್ನೊಳಗಿತ್ತು. ಅಸಾಂಪ್ರದಾಯಿಕ ಶಕ್ತಿ ಮೂಲಗಳಲ್ಲಿ ಪ್ರಮುಖವಾಗಿರುವುದು ಸೌರಶಕ್ತಿ. ಭೂಮಿಯ ಸಮಭಾಜಕ ವೃತ್ತದ ಸಮೀಪವಿರುವ ಭಾರತಕ್ಕೆ ಬಿಸಿಲಿನ ತಾಪ ಮತ್ತು ಅವಧಿ ಹೆಚ್ಚು. ಗಾಳಿಯ ಶಕ್ತಿ ಪರಿವರ್ತನೆಗಿಂತಲೂ ನಾವು ಸೌರ ಶಕ್ತಿಯ ಪರಿವರ್ತನೆಯ ಬಗ್ಗೆ ಹೆಚ್ಚು ಗಮನ ಹರಿಸಬೇಕೆಂಬ ಅಭಿಪ್ರಾಯ ಜನಾರ್ದನ ಸ್ವಾಮಿಯವರದ್ದು. ಈ ಕುರಿತು ಲೋಕಸಭೆಯಲ್ಲಿ ಹಲವಾರು ಬಾರಿ ಅವರು ಪ್ರಸ್ತಾಪಿಸಿದ್ದಾರೆ. ಮಾಹಿತಿ ತಂತ್ರಜ್ಞಾನದ ಅನುಕೂಲಗಳನ್ನು ಬಳಸುವಲ್ಲಿ ಜನಾರ್ದನಸ್ವಾಮಿ ಮುಂಚೂಣಿಯಲ್ಲಿದ್ದಾರೆ. ಲೋಕಸಭೆಯಲ್ಲಿ ತಾವು ಕೇಳಿದ ಪ್ರಶ್ನೆಗಳು, ಅವುಗಳಿಗೆ ಪಡೆದ ಉತ್ತರಗಳನ್ನು ತಮ್ಮ ವೆಬ್‌ಸೈಟ್‌ನಲ್ಲಿ ದಾಖಲಿಸಿಟ್ಟುಕೊಂಡಿದ್ದಾರೆ.

ಅವರನ್ನು ಭೆಟ್ಟಿ ಮಾಡಿದ ಸಂಜೆಯೇ 'ಕನ್ನಡ ವಿಜ್ಞಾನ ಪರಿಷತ್ತಿನ' ಸಮಾರಂಭ. ಅಧ್ಯಕ್ಷ ಭಾಷಣವೆಂದರೆ ವೇದಿಕೆಯ ಮೇಲೆ ಕುಳಿತ ಎಲ್ಲರ ಮಾತುಗಳು ಮುಗಿದ ನಂತರದ ಸಮಾರೋಪ ಸಾರಾಂಶ. ಸಭಿಕರ ನಿರೀಕ್ಷೆಗಳನ್ನು ಜನಾರ್ದನ ಸ್ವಾಮಿ ಹುಸಿಯಾಗಿಸಲಿಲ್ಲ. ತಾವು ರಾಜಕೀಯಕ್ಕಿಳಿದ ಸಂದರ್ಭವನ್ನು ಸರಳ ಮತ್ತು ನೇರ ಮಾತುಗಳಿಂದ ವಿವರಿಸಿದರು. 'ವೃತ್ತಿನಿರತ' ರಾಜಕಾರಣಿಗಳ ಒಡನಾಟದೊಂದಿಗೆ, ವ್ಯವಸ್ಥೆಯ ಕಟ್ಟುಪಾಡುಗಳೊಂದಿಗೆ ಸಂಸದರು ಅಭಿವೃದ್ಧಿ ಕಾರ್ಯ ನಡೆಸಬೇಕಾದ ಅನಿವಾರ್ಯತೆಯನ್ನು ಪ್ರಸ್ತಾಪಿಸಿದರು. ಹಾಗೆಯೇ ವಿಜ್ಞಾನ ಮತ್ತು ತಂತ್ರಜ್ಞಾನದ ಪ್ರಗತಿ ದೇಶದ ಮುನ್ನಡೆಗೆ ಕಾರಣವಾಗುತ್ತದೆಂದರು. ದೇಶ ಹಾಗೂ ರಾಜ್ಯ ಸರಕಾರಗಳ ಸಾಮುದಾಯಿಕ ಸೌಕರ್ಯಗಳ ನೆರವಿನಿಂದ ಉನ್ನತ ವಿದ್ಯಾಭ್ಯಾಸ ಪಡೆದ ವಿದ್ಯಾರ್ಥಿಗಳು ದೇಶೀಯ ಸಂಶೋಧನೆ ಸಂಸ್ಥೆಗಳಿಗೆ ಲಭ್ಯವಾಗದೆ, ವಿದೇಶಿ ಕಂಪನಿಗಳಿಗೆ ವಲಸೆ ಹೋಗುವ ಪರಿಪಾಠದ ಬಗ್ಗೆಯೂ ಪ್ರಸ್ತಾಪಿಸಿದರು. ಹೀಗೆ ನೆಲೆಕಂಡ ಭಾರತೀಯ ವಿಜ್ಞಾನಿ-ತಂತ್ರಜ್ಞರ ನೆರವಿನಿಂದಲೇ ವಿದೇಶಿ ಕಂಪನಿಗಳಲ್ಲಿ ಅಭಿವೃದ್ಧಿಯಾದ ತಂತ್ರಜ್ಞಾನಗಳು ಭಾರತೀಯರಿಗೆ ಕೈಗೆಟುಕದಷ್ಟು ದುಬಾರಿಯಾಗಿರುವುದು, ಹಾಗೆಯೇ ಅಂಥ ತಂತ್ರಜ್ಞಾನಗಳು ಕೆಲವೊಮ್ಮೆ ಜಾಗತಿಕ ರಾಜಕಾರಣದ ಫಲದಿಂದ ಮಾರಾಟ ನಿರ್ಬಂಧಕ್ಕೊಳಗಾಗುವುದರ ಬಗ್ಗೆ ವ್ಯಥೆಪಟ್ಟರು. ಎಲ್ಲಕ್ಕೂ ಮಿಗಿಲಾಗಿ ವಿಜ್ಞಾನ- ತಂತ್ರಜ್ಞಾನಗಳು ಸಾಮಾನ್ಯ ಜನರನ್ನು ತಲುಪಬೇಕು, ಆವಿಷ್ಕಾರಗಳು ಎಲ್ಲೇ ನಡೆಯಲಿ ಅದರ ಬಗ್ಗೆ ಮಾಹಿತಿ ಕನ್ನಡದಲ್ಲೇ ಲಭ್ಯವಾಗಬೇಕೆಂದರು.

ಅವರ ಕಳಕಳಿಯ ಬಹುತೇಕ ಅಂಶಗಳು ಇದೀಗ ಸಾಕಾರಗೊಳ್ಳುತ್ತಿರುವುದು ಪ್ರಶಂಸನಾರ್ಹ. ಉದಾಹರಣೆಗೆ ಜನಾರ್ದನ ಸ್ವಾಮಿ ಪ್ರತಿಷ್ಠಿತ ಅಮೆರಿಕನ್ ಕಂಪ್ಯೂಟರ್ ಕಂಪನಿ 'ಸನ್ ಮೈಕ್ರೋ ಸಿಸ್ಟಮ್ಸ್' ಕಂಪನಿಯಲ್ಲಿ ಪ್ರಧಾನ ಎಂಜಿನಿಯರ್ ಆಗಿದ್ದವರು. ಚಿತ್ರದುರ್ಗದ ಸಂಸದರ ಮಾಹಿತಿ ಕೇಂದ್ರದಲ್ಲಿ ಯೋಜನೆಗಳ ಮಾಹಿತಿಯ ಸಂಪೂರ್ಣ ಗಣಕೀಕರಣವನ್ನು ಈ ಸಂಸ್ಥೆ ಹೊತ್ತುಕೊಂಡಿದೆ. ಕನ್ನಡ-ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ಕೈಪಿಡಿ ಹಾಗೂ ಅರ್ಜಿಗಳು ಮಾಹಿತಿ ಕೇಂದ್ರದಲ್ಲಿ ಲಭ್ಯವಿದೆ. ಎಲ್ಲಕ್ಕೂ ವಿಶೇಷವೆಂದರೆ ಆಸಕ್ತರು ಮಾಹಿತಿ ಕೇಂದ್ರದಲ್ಲಿ ಕಂಪ್ಯೂಟರ್ ಬಗ್ಗೆ ಪ್ರಾಥಮಿಕ ಶಿಕ್ಷಣವನ್ನೂ ಸಹ ಪಡೆಯಬಹುದು.

ತಾವು ಪ್ರತಿನಿಧಿಸುವ ಕ್ಷೇತ್ರಕ್ಕಷ್ಟೇ ಅಲ್ಲ, ಜನಾರ್ದನ ಸ್ವಾಮಿ ಅವರು ಇಡೀ ರಾಜ್ಯಕ್ಕೆ ಹೆಮ್ಮೆ ತಂದಿದ್ದಾರೆ ಎಂದರೆ ಅತಿಶಯೋಕ್ತಿಯ ಮಾತಲ್ಲ.